ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
-ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ    EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com    ಇ-ಪೇಪರ್bidarvani.online    bidarvani    bidarvani@gmail.com    Whatsapp    Contact:9148471077

KARKAN/77693/2019    ಸಂಪುಟ:08    ಸಂಚಿಕೆ:208    ದಿನಾಂಕ:18.11.2025    ಮಂಗಳವಾರ    ಪುಟ.4    ಬೆಲೆ:02 ರೂ    ಮೊ.9945793175

## ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಲ್ಲಿ ವ್ಯಸನಿಗಳ ಸಂಖ್ಯೆ ಹೆಚ್ಚುತ್ತಿದೆ-ಸಚಿವ ಈಶ್ವರ ಬಿ.ಖಂಡ್ರೆ



ಬೀದರ.ನ.17:ಇತ್ತೀಚಿಗೆ ಆರೋಗ್ಯ, ಇಂಜಿನಿಯರರಿಂಗ್ ಸೇರಿದಂತೆ ಇತರೆ ವೃತ್ತಿಪರ ಕೋರ್ಸುಗಳ ವಿದ್ಯಾರ್ಥಿಗಳಲ್ಲಿ ಮಾದಕ ವಸ್ತು ಸೇವನೆ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿದ್ದೆ, ಆದ್ದರಿಂದ ಅವರಿಗೆ ಸರಿದಾರಿಗೆ ತರಲು ಎಲ್ಲರೂ ಕಟಿಬದ್ಧರಾಗಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಹೇಳಿದರು. ಅವರು ಸೋಮವಾರ ಬೀದರ ನಗರದ ಬ್ರಿಮ್ಸ್ ಸಭಾಂಗಣದಲ್ಲಿ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿರುವ ಬೀದರ ಜಿಲ್ಲೆಯ ಎಲ್ಲಾ ಮಹಾವಿದ್ಯಾಲಯಗಳ ಅಡಿಯಲ್ಲಿ ಆಯೋಜಿಸಿದ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿರುವ ಬೀದರ ಜಿಲ್ಲೆಯ ಎಲ್ಲಾ ಮಹಾವಿದ್ಯಾಲಯಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ ಅಂಗಾಂಗ ದಾನ ಹಾಗೂ ನಶಾ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ಯುಕರು ಪ್ರತಿಭಾವಂತರಿದ್ದಾರೆ ಆದರೆ ದುರ್ಗುಣ- ದುಶ್ಚಟಗಳಿಗೆ ಬಲಿಯಾಗಿ ದಾರಿ ತಪ್ಪುತ್ತಿದ್ದಾರೆ ಅವರಿಗೆ ಸರಿದಾರಿಗೆ ತರವುದು ನಮ್ಮೆಲ್ಲರ ಕರ್ತವ್ಯವಾಗಿದೆ. "ನಶೆ ಸಮಾಜವನ್ನು ನಾಶಮಾಡುವ ಮಹಾ ವ್ಯಾಧಿ. ಯುವಜನತೆಗೆ ಮಾರ್ಗದರ್ಶನ ನೀಡುವುದು, ಕುಟುಂಬ□ಶಾಲೆ□ಸಮಾಜ ಎಲ್ಲವೂ ಜವಾಬ್ದಾರಿ ತೆಗೆದುಕೊಳ್ಳುವುದು ಅತ್ಯಗತ್ಯ. ನಶಾ ಮುಕ್ತ ಭಾರತವು ಕೇವಲ ಅಭಿಯಾನವಲ್ಲ ಇದು ಆರೋಗ್ಯಕರ, ಜಾಗೃತ ಮತ್ತು ಶಕ್ತಿಯುತ ರಾಷ್ಟ್ರ ನಿರ್ಮಾಣದ ದಿಕ್ಕು," ಎಂದರು. "ಜೀವ ಉಳಿಸುವ ಅತ್ಯಂತ ಮಹತ್ವದ ಸೇವೆ ಎಂದರೆ ಅಂಗಾಂಗ ದಾನ. ಅರಿವು □ ಶಿಕ್ಷಣ □ ಪ್ರೇರಣೆಯ ಮೂಲಕ ಸಮಾಜದಲ್ಲಿ ದಾನಧರ್ಮದ ಮನೋಭಾವ ಬೆಳೆಸಬೇಕು. ಸರ್ಕಾರ ಮತ್ತು ಆರೋಗ್ಯ ಇಲಾಖೆಯು ಸಂಪೂರ್ಣ ಪಾರದರ್ಶಕ ವ್ಯವಸ್ಥೆಯನ್ನು ನಿರ್ಮಿಸಿ ಜನರಲ್ಲಿ ವಿಶ್ವಾಸ ಹೆಚ್ಚಿಸುವತ್ತ ಕೆಲಸ ಮಾಡುತ್ತಿದೆ." ಎಂದು ಹೇಳಿದರು.

ಪೌರಾಡಳಿತ ಹಾಗೂ ಹಜ್ ಖಾತೆ ಸಚಿವ ರಹೀಂ ಖಾನ್ ಅವರು ಮಾತನಾಡಿ, ಇತ್ತೀಚಿಗೆ ಯುವಕರು ದುಶ್ಚಟಗಳಿಗೆ ಬಲಿಯಾಗಿ ಅದರ ಗುಂಗಲ್ಲಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ ಇದು ಅತ್ಯಂತ ದೊಡ್ಡ ದುರಂತ. ಅವರನ್ನು ಸರಿದಾರಿಗೆ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಭಗವಾನ್ ಬಿ.ಸಿ ಮಾತನಾಡಿ, ನಮ್ಮ ರಾಜೀವ ಗಾಂಧಿ ಆರೋಗ್ಯ, ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯ ಹಾಗೂ ಕಾಲೇಜುಗಳನ್ನು ನಶೆಮುಕ್ತ ಮಾಡುವ ಸಂಕಲ್ಪದೊಂದಿಗೆ ಈ ಅಭಿಯಾನ ಪ್ರಾರಂಭ ಮಾಡಿದ್ದೇವೆ. ಇದರ ಜೊತೆಗೆ ಅಂಗಾಂಗ ದಾನ, ಪರಿಸರ ರಕ್ಷಣೆ, ಮಾನಸಿಕ ಹಾಗೂ ದೈಹಿಕ ಒತ್ತಡ ನಿವಾರಣೆಗಾಗಿ ಆರೋಗ್ಯ ಕ್ಷೇಮ ತರಬೇತಿ ಕೇಂದ್ರ ಪ್ರಾರಂಭ, ಒತ್ತಡ ನಿವಾರಣೆಗಾಗಿ ದಿನನಿತ್ಯ ಯೋಗ ಅಭ್ಯಾಸದ ಅಭಿಯಾನವನ್ನು ಸಹ ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ಉಚಿತವಾಗಿ ಸ್ತನ ಕ್ಯಾನ್ಸಲ್ ಪರೀಕ್ಷೆ ಹಾಗೂ 7 ಮತ್ತು 8 ತರಗತಿ ವಿದ್ಯಾರ್ಥಿಗಳಿಗೆ ಹೆಚ್.ಪಿ.ವಿ ಲಸಿಕೆ ನೀಡುವ ಚಿಂತನೆ ಇದೆ ಎಂದರು. ಕಾರ್ಯಕ್ರಮದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ನಶಾ ಮುಕ್ತ ಹಾಗೂ ಅಂಗಾಂಗ ದಾನದ ಕುರಿತು ಜಾಗೃತಿಯ ನಾಟಕ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ್, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಬ್ರಿಮ್ಸ್ ನಿರ್ದೇಶಕ ಶಿವಕುಮಾರ್ ಶೇಟಕಾರ್, ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ರಫೀಕ್, ವೊಬುಲ್ ರೆಡ್ಡಿ, ಸೇನೆಟ್ ಸದಸ್ಯರಾದ ಶ್ರೀನಿವಾಸ್ ವೇಲುರ್, ಮಹೆಂದ್ರ ರೆಡ್ಡಿ, ಸರ್ಕಾರಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ರಾಜಕುಮಾರ ಮಾಳಗೆ, ವಾಸಿಮ್ ಸೇರಿದಂತೆ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆಗೊಂಡಿರುವ ಬೀದರ ಜಿಲ್ಲೆಯ ಎಲ್ಲಾ ಮಹಾವಿದ್ಯಾಲಯಗಳ ಅಧ್ಯಕ್ಷರು, ಪ್ರಾಂಶುಪಾಲರು ಸೇರಿದಂತೆ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ
## ಬೌದ್ಧ ಸಾಂಸ್ಕೃತಿಕ ಭವನಕ್ಕೆ ರೂ. 10 ಕೋಟಿ ಅನುದಾನ

ಬೀದರ್.ನ.17:ಆಣದೂರಿನಲ್ಲಿ ಬೌದ್ಧ ಸಾಂಸ್ಕತಿಕ ಭವನ ನಿರ್ಮಾಣಕ್ಕೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರೂ. 10 ಕೋಟಿ ಅನುದಾನ ಒದಗಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ತಾಲ್ಲೂಕಿನ ಆಣದೂರಿನ ಬೌದ್ಧ ವಿಹಾರದಲ್ಲಿ ಭಾನುವಾರ ನಡೆದ ಬೌದ್ಧ ಸಮ್ಮೇಳನ ಹಾಗೂ ಆನಂದ ಬೋಧಿ ಬೌದ್ಧ ಮಹಾ ಸ್ತೂಪದ 12ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರೊಂದಿಗೆ ಚರ್ಚಿಸಿ ಕಲಬುರಗಿ ಅಥವಾ ಉದಗಿರ ಮಾದರಿಯಲ್ಲಿ ಭವನ ನಿರ್ಮಾಣ ಮಾಡಲಾಗುವುದು ಎಂದು ತಿಳಿಸಿದರು.

ಬೌದ್ಧ ವಿಹಾರದ ಅಭಿವೃದ್ಧಿಗೆ ಸಾಧ್ಯವಾದ ಎಲ್ಲ ನೆರವು ನೀಡಲಾಗುವುದು ಎಂದು ಹೇಳಿದರು. ಗೌತಮ ಬುದ್ಧರ ತತ್ವಗಳ ಪಾಲನೆಯಿಂದ ಜೀವನದಲ್ಲಿ ಶಾಂತಿ, ನೆಮ್ಮದಿ ದೊರೆಯುತ್ತದೆ ಎಂದು ತಿಳಿಸಿದರು. ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಮಾತನಾಡಿದರು. ಭಂತೆ ಧಮ್ಮಾನಂದ ಸಾನಿಧ್ಯ ವಹಿಸಿದ್ದರು. ಭಂತೆ ಜ್ಞಾನಸಾಗರ್, ಭಂತೆ ಸಂಘ ರಖ್ಖಿತ, ಭಂತೆ ಜ್ಞಾನಪ್ರಕಾಶ್, ಬೀದರ್ ಮಹಾನಗರ ಪಾಲಿಕೆ ಅಧ್ಯಕ್ಷ ಮುಹಮ್ಮದ್ ಗೌಸ್, ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ, ಗ್ರಾಮ ಪಂಚಾಯಿತಿ ಅಧ್ಯಕ್ಷ, ಸದಸ್ಯರು ಹಾಗೂ ಗಣ್ಯರು ಹಾಜರಿದ್ದರು. ಬೌದ್ಧ ಉಪಾಸಕ, ಉಪಾಸಕಿಯರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.




## ನೈಸರ್ಗಿಕ ಕೃಷಿ ಕುರಿತು ಐದು ದಿನಗಳ ತರಬೇತಿ ಸಮಾರೋಪ ಸಮಾರಂಭ:
## ನೈಸರ್ಗಿಕ ಕೃಷಿ ಹೆಚ್ಚಿಸಲು ಶ್ರಮವಹಿಸಿ-ಡಾ.ಸುರೇಶ ಪಾಟೀಲ



ಬೀದರ.ನ.17:ನೈಸರ್ಗಿಕ ಕೃಷಿ ತರಬೇತಿ ಕಾರ್ಯಕ್ರಮದಲ್ಲಿ ಕಲಿತ ಪದ್ಧತಿ ಪ್ರಾತ್ಯಕ್ಷಿಕೆಗಳಾದ ಬೀಜಾಮೃತ, ಜೀವಾಮೃತ, ನೀಮಾಸ್ತ್ರ, ಅಗ್ನಿ ಅಸ್ತ್ರ, ದಶಪರಣಿ, ಹುಳಿ ಮಜ್ಜಿಗೆ ಮತ್ತು ಘನಜೀವಾಮೃತ ಇವುಗಳ ಮಾಹಿತಿಯನ್ನು ನಿಮ್ಮ ಊರಿನ ರೈತರಿಗೆ ತಲುಪಿಸಿ ನೈಸರ್ಗಿಕ ಕೃಷಿ ಹೆಚ್ಚಿಸಲು ಶ್ರಮವಹಿಸಿ ಎಂದು ಕಲಬುರಗಿ ಕೃಷಿ ಮಹಾವಿದ್ಯಾಲಯದ ನಿವೃತ್ತಿ ಡೀನ್ ಡಾ.ಸುರೇಶ ಪಾಟೀಲ್ ಕರೆ ನೀಡಿದರು.

ಅವರು ಸೋಮವಾರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟ, ತೋಟಗಾರಿಕಾ ಮಹಾವಿದ್ಯಾಲಯ ಬೀದರ ಮತ್ತು ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್, ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ನವದೆಹಲಿ ಇವರ ಸಹಯೋಗದಲ್ಲಿ ಬೀದರ ಜಿಲ್ಲೆಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿಗಳಿಗೆ) ಬೀದರ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಆಯೋಜಿಸಲಾದ "ನೈಸರ್ಗಿಕ ಕೃಷಿ" ಕುರಿತು ಐದು ದಿನಗಳ ತರಬೇತಿ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬೀದರ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಹಾಗೂ ತರಬೇತಿಯ ಆಯೋಜಕರಾದ ಡಾ.ಎಸ್.ವಿ. ಪಾಟೀಲ ಮಾತನಾಡಿ, ಎಲ್ಲಾ ಕೃಷಿ ಸಖಿಯರಿಗೆ ತರಬೇತಿ ಯಶಸ್ವಿಯಾಗಿ ಮುಗಿಸಿದಕ್ಕಾಗಿ ಅಭಿನಂದಿಸಿ ಎಲ್ಲರಿಗೂ ಪ್ರಮಾಣ ಪತ್ರ ಹಾಗೂ ನೈಸರ್ಗಿಕ ಕೃಷಿಯ ಸಮಗ್ರ ಮಾಹಿತಿಯನ್ನೊಳಗೊಂಡ ತರಬೇತಿ ಕೈಪೀಡಿ ಹಾಗೂ ಪೆನ್ ಡ್ರೈವ್ ಅನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಬೀದರ, ಭಾಲ್ಕಿ ಮತ್ತು ಬಸವಕಲ್ಯಾಣ ತಾಲೂಕಿ ವಿವಿಧ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 30 ಕೃಷಿ ಸಖಿಯರು ಈ ತರಬೇತಿಯ ಲಾಭ ಪಡೆದಿರುತ್ತಾರೆ ಎಂದು ಹೇಳಿದರು.

ಈ ತರಬೇತಿ ಕಾರ್ಯಕ್ರಮದಲ್ಲಿ ಸಂಯೋಜಕರಾದ ಡಾ. ವಿಜಯಮಹಾಂತೇಶ ರವರು ಕಾರ್ಯಕ್ರಮದ ಸಮಗ್ರ ವರದಿಯನ್ನು ಹೇಳಿದರು. ಹಾಗೂ ಈ ಕಾರ್ಯಕ್ರಮದಲ್ಲಿ ಸಹ ಸಂಯೋಜಕರುಗಳಾದ ಡಾ. ಅರವಿಂದಕುಮಾರ ರಾಠೋಡ ಸ್ವಾಗತಿಸಿದರು. ಡಾ. ವಿ.ಪಿ. ಸಿಂಗ ಹಾಗೂ ಡಾ. ಮೊಹ್ಮದ್ ಫಾರೂಕ್ ಇವರುಗಳ ಉಪಸ್ಥಿತರಿದ್ದು, ಡಾ. ಅಬ್ದುಲ್ ಕರೀಮ ವಂದಿಸಿದರು.

## ಸಹಕಾರ ಕ್ಷೇತ್ರವೂ ದೇಶದ ಮೂಲೆ ಮೂಲೆಯಲ್ಲಿ ಹರಡಿಕೊಂಡಿದೆ - ಶಕುಂತಲಾ ಕೆ ಬೆಲ್ದಾಳೆ

ಬೀದರ್.ನ.17:ಸಹಕಾರ ಕ್ಷೇತ್ರವೂ ದೇಶದ ಮೂಲೆ ಮೂಲೆಯಲ್ಲಿ ಹರಡಿಕೊಂಡಿದೆ. ಕುಂಬಾರರ ಕರಕುಶಲ ಕೈಗಾರಿಕೆ ಸಹಕಾರ ಸಂಘಗಳಲ್ಲಿ ಜರುಗುವ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಹೆಚ್ಚು ಪ್ರಚಾರ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ, ಅಧ್ಯಕ್ಷರಾದ ಶ್ರೀಮತಿ ಶಕುಂತಲಾ ಕೆ ಬೆಲ್ದಾಳೆ ಅವರು ಹೆಳಿದರು.

ಅವರು ಶನಿವಾರ ಬೆಳಿಗ್ಗೆ ಬೀದರ ತಾಲೂಕಿನ ಕಪಲಾಪೂರ್ (ಎ) ಗ್ರಾಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಬೀದರ ಜಿಲ್ಲಾ ಸಹಕಾರ ಯೂನಿಯನ್ ನಿ., ಬೀದರ, ಸಹಕಾರ ಇಲಾಖೆ ಬೀದರ, ಮತ್ತು ಭಕ್ತ ಕುಂಬಾರ ಮಹಿಳಾ ಗುಡಿ ಕೈಗಾರಿಕೆ ಸಂಘ ಕಪಲಾಪೂರ (ಎ) ಇವರ ಸಂಯುಕ್ತ ಆಶ್ರಯದಲ್ಲಿ 72ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ : "ಆತ್ಮ ನಿರ್ಭರ ಭಾರತ ಸಾಧನೆಗೆ ವಾಹಕಗಳಾಗಿ ಸಹಕಾರ ಸಂಸ್ಥೆಗಳು" ಎರಡನೇ ದಿನ ವಿಷಯ "ತ್ರಿಭುವನ್ ಸಹಕಾರ ವಿಶ್ವವಿದ್ಯಾಲಯ, ಸಂಶೋಧನೆ ಮತ್ತು ತರಬೇತಿಯಿಂದ ಸಹಕಾರ ಶಿಕ್ಷಣದಲ್ಲಿ ಪರಿವರ್ತನೆ" ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸಹಕಾರ ಸಂಘಗಳಲ್ಲಿ ಮಹಿಳೆಯರು ಕೂಡ ಭಾಗ ವಹಿಸುತ್ತಿರುವುದು ಸಂತೋಷ ವಿಷಯವಾಗಿದೆ. ಇದೇ ರೀತಿ ಮಹಿಳೆಯರು ಇನ್ನು ಹೆಚ್ಚಿನ ರೀತಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಭಾಗವಹಿಸಿ ಸಹಕಾರ ಕ್ಷೇತ್ರವನ್ನು ಅಭಿವೃದ್ಧಿ ಪಡಿಸೋಣ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ನಿರ್ದೇಶಕ ಹಾಗೂ ಜಿಲ್ಲಾ ಸಹಕಾರ ಯೂನಿಯನ್ ನಿ., ಅಧ್ಯಕ್ಷರಾದ ಅಭಿಷೇಕ ಆರ್. ಪಾಟೀಲ್ ಅವರು ಮಾತನಾಡುತ್ತ, ಸಹಕಾರ ತರಬೇತಿ, ಶಿಕ್ಷಣ ಮತ್ತು ಪ್ರಚಾರ ನಮ್ಮ ಯೂನಿಯನ್‌ನ ಮುಖ್ಯ ಉದ್ದೇಶವಾಗಿದೆ. ನಮ್ಮ ಯೂನಿಯನ್ ಪರವಾಗಿ ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು. ಕುಂಬಾರರ ಸಹಕಾರ ಸಂಘಗಳು ಇನ್ನು ಹೆಚ್ಚಿನ ರೀತಿಯಲ್ಲಿ ಮಡಿಕೆ ತಯ್ಯಾರಿಸಿ ಹೆಚ್ಚು ಹೆಚ್ಚು ಆರ್ಥಿಕವಾಗಿ ಸದೃಢರಾಗಲಿ ಎಂದು ಶುಭ ಹಾರೈಸಿದರು.

ಕಪಲಾಪೂರ (ಎ) ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸತೀಶ ಹುಲೆಪ್ಪಾ ಸಿಕೇನಪೂರ ಅವರು ಕಾರ್ಯಕ್ರಮ ಉದ್ಘಾಟಿಸಿದರು. ನೌಬಾದನ ಸಹಾರ್ದ ತರಬೇತಿ ಕೇಂದ್ರದ ನಿರ್ದೇಶಕರಾದ ಸುಬ್ರಮಣ್ಯ ಪ್ರಭು ಉಪನ್ಯಾಸ ನೀಡಿದರು. ಪಿಡಿಓ ಧನರಾಜ,

ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಬಾಬುರಾವ ಕುಂಬಾರ, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ಸುನೀಲ ಭಾವಿಕಟ್ಟಿ, ನಿವೃತ್ತ ಪ್ರಾಂಶುಪಾಲರು ಹಣಮಂತರಾವ ಮೈಲಾರೆ, ಭಕ್ತ ಕುಂಬಾರ ಮಹಿಳಾ ಗುಡಿ ಕೈಗಾರಿಕೆ ಸಂಘದ ಅಧ್ಯಕ್ಷೆ ಶ್ರೀಮತಿ ಮಹಾದೇವಿ ಕುಂಬಾರ, ಪ್ರಮುಖರಾದ ಶಿವಾನಂದ ಕುಂಬಾರ, ಶ್ರೀಮತಿ ಶ್ರಾವಣಿ ಕುಂಬಾರ್, ಕುಂಬಾರ ಗುಂಡಯ್ಯಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಸುಂದ್ರಮ್ಮಾ ಕುಂಬಾರ, ಮಲ್ಲಿಕಾರ್ಜುನ ಕುಂಬಾರ, ಶಿವರಾಜ ಕುಂಬಾರ, ಮಹೇಶ ವಿಶ್ವಕರ್ಮ ಸೇರಿದಂತೆ ಮತ್ತಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಮೊದಲಿಗೆ ಕು. ಭೂಮಿಕಾ ಮತ್ತು ಸಂಗಡಿಗರು ಪ್ರಾಥನೆ ಗೀತೆ ಹಾಡಿದರು. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಬಾಬುರಾವ ಕುಂಬಾರ ಸ್ವಾಗತಿಸಿದರು. ಮಾರುತಿ ನಿರೂಪಿಸಿದರೇ, ಶ್ರೀಮತಿ ಹೆಚ್.ಆರ್. ಮಲ್ಲಮ್ಮ ಅವರು ವಂದಿಸಿದರು.



# ತುಂಗಭದ್ರ ಜಲಾಶಯದ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯಗಳು



ಬಳ್ಳಾರಿ.ನ.17:ಉಪ-ಮುಖ್ಯ ಮಂತ್ರಿಗಳು ಮತ್ತು ಜಲ ಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ವಿಧಾನ ಸೌಧದ ಸಭಾಂಗಣದಲ್ಲಿ ನಡೆದ ತುಂಗಭದ್ರ ಜಲಾಶಯದ ಬೇಸಿಗೆ ಬೆಳೆಯ ನೀರಾವರಿ ಸಲಹಾ ಸಮಿತಿಯ ಸಭೆಯ ನಿರ್ಣಯಗಳು 100 ಟಿ.ಎಮ್.ಸಿ ಸಮರ್ಥ್ಯದ ಜಲಾಶಯದಲ್ಲಿ ನೀರಾವರಿ ತಜ್ಞರ ಸಲಹೆಯ ಮೇರೆಗೆ 80 ಟಿ.ಎಮ್.ಸಿ ನೀರನ್ನು ಮತ್ರ ಶೇಖರಣೆ ಮಾಡಲಾಗಿದೆ.

ಈಗ ಜಲಾಶ ಯದಲ್ಲಿ 75 ಟಿ.ಎಮ್.ಸಿ ಮಾತ್ರ ನೀರು ಉಳಿದಿವೆ. ಬೇಸಿಗೆ ಬೆಳೆಗೆ ನೀರು ಕೊ ಡಲು ಇನ್ನೂ 20 ಟಿ.ಎ ಮ್.ಸಿ ನೀರು ಬೇಕಾಗಿದೆ.

ಹಾಗು ಎಲ್ಲಾ ಕಾಲುವೆಗಳ ಬೆಳೆದು ನಿಂತಿರುವ ಎಲ್ಲ ಬೆಳೆಗಳಿಗೆ ನೀರು ಕೊಡಬೇ ಕಾಗಿರುತ್ತದೆ. ಆದ ಕಾರಣ ಬೇಸಿಗೆ ಬೆಳೆಗೆ ನೀರು ಕೊ ಡಲು ಆಗುವುದಿಲ್ಲವೆಂದು ಸಭೆಯು ತೀರ್ಮಾನ ಕೈಗೊಂಡಿದೆ.

ಜಲಾಶಯದ ಬಲದಂಡೆಯ ಹೆಚ್.ಎಲ್.ಸಿ ಕಾಲುವೆ ಹಾಗೂ ಎಲ್.ಎಲ್.ಸಿ ಕಾಲುವೆ ಮತ್ತು ಎಡ ದಂಡೆಯ ಎಲ್.ಬಿ.ಎಂ.ಸಿ ಕಾಲುವೆಗೆ ಜನವೇರಿ 10 ವರೆಗೆ ಮಾತ್ರ ನೀರು ಬಿಡಲು ಸಭೆಯು ತೀರ್ಮಾನಿಸಿದೆ.

ಮಾರ್ಚ್ 20 ರಲ್ಲಿ ಹಾಗೂ ಮೇ 05 ರಲ್ಲಿ ಎಲ್ಲಾ ಕಾಲುವೆಗಳಿಗೆ ಕುಡಿಯುವ ನೀರು ಬಿಡಲು ತೀರ್ಮಾನಿಸಿದೆ.

ರಾಯ, ಬಸವ ಕಾಲುವೆ ಮತ್ತು ವಿಜಯ ನಗರ ನಾಲೆಗಳಿಗೆ ಮೇ 05 ರ ವರೆಗೆ ನೀರು ಕೊಡಲು ಸಭೆ ಒಪ್ಪಿಗೆ ನೀಡಿದೆ.

ನದಿಯ ಮೂಲಕ ತೆಲಂಗಾಣದ ರಾಜೋಲಿಬಂಡ ಜಲಾಶಯಕ್ಕೂ ಮತ್ತು ಆಂದ್ರ ಪ್ರದೇಶದ ಸುಂಕೇಶೋಲ ಜಲಾಶಯುಕ್ಕೂ ಅವರ ಖೋಟಾದ ನೀರು ಬಿಡಲು ಸಭೆ ಸಮ್ಮತಿಸಿದೆ.

ತುಂಗಭದ್ರ ಜಲಾಶಯಕ್ಕೆ ಡಿಸೆಂಬರ್ 20 ರಿಂದ ನೂತನ ಗೇಟ್ ಗಳನ್ನು ಅಳವಡಿಸಲು ಪ್ರಾರಂಭಿಸಿ ಜೂನ್ 26 ರ ವಳಗೆ ಸಂಪೂರ್ಣ 33 ಗೇಟ್‌ಗಳನ್ನು ಅಳವಡಿಸಲು ಸಭೆಯು ತೀರ್ಮಾನಿಸಿದೆ.

ಬೇಸಿಗೆ ಬೆಳೆಗೆ ನೀರು-ಬೇಸಿಗೆ ಬೆಳೆಗೆ ನೀರು ಪಡೆಯುವ ಕುರಿತು ಹಲವಾರು ವಿಚಾರಗಳನ್ನು ಸಭೆಯಲ್ಲಿ ತುಂಗಭದ್ರ ರೈತ ಸಂಘದಿಂದ ಉಪ-ಮುಖ್ಯ ಮಂತ್ರಿಗಳಿಗೆ ವಿಷಯ ವ್ಯಕ್ತ ಪಡಿಸಿರುತ್ತೇವೆ. ಆದರೆ ನಿಮಗೆ ಜಲಾಶಯ ಮುಖ್ಯವೋ ಅಥವಾ ಒಂದು ಬೆಳೆ ಮುಖ್ಯವೋ, ನಾವು ಸಂಪೂರ್ಣ ಗೇಟ್ ಗಳನ್ನು ಅಳವಡಿಸುವ ಕಾರ್ಯವನ್ನು ಆಂಧ್ರ ಮತ್ತು ಕರ್ನಾಟಕ ಜಂಟಿಯಾಗಿ ಮಾಡಬೇಕಾಗಿರುವುದರಿಂದ ಬೇಸಿಗೆ ಬೆಳೆಗೆ ನೀರು ಕೊಡಲು ಆಗುವುದಿಲ್ಲ ಎಂದು ತಿಳಿಸಿದರು ಎಂದು ತುಂಗಭದ್ರಾ ರೈತ ಸಂಘದ ಅಧ್ಯಕ್ಷರಾದ ಪುರುಷೋತ್ತಮ ಗೌಡ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ

# ಒಗ್ಗಟ್ಟಿನ ಹೋರಾಟ ಅಗತ್ಯ

ಚನ್ನಮ್ಮನ ಕಿತ್ತೂರು,ನ.17:ರೈತರೆಲ್ಲರೂ ಒಂದಾದಾಗ ಮಾತ್ರ ಸರ್ಕಾರಗಳು ಬಾಗುತ್ತವೆ ಎಂದು ರಾಜಗುರು ಸಂಸ್ಥಾನ ಕಲ್ಮಠ ಮಡಿವಾಳ ರಾಜಯೋಗೀಂದ್ರ ಸ್ವಾಮಿಜೀ ಖಡಕ್ಕಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ಪೂರೈಕೆ ಮಾಡುತ್ತಾರೆ ಆದರೆ ತೂಕದಲ್ಲಿ ಮೋಸ ಇದಾಗಬಾರದೆಂದರೆ ರೈತರೆಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಿದಾಗ ಮಾತ್ರ ಇದು ನಿಲ್ಲುತ್ತದೆ ಮತ್ತು ಇದರೊಂದಿಗೆ ರೈತ ವಿವಿಧ ಬೆಳೆಗಳನ್ನು ಬೆಳೆಯುತ್ತಾನೆ ಅದಕ್ಕೆ ಯೋಗ್ಯ ಬೆಲೆ ಇಲ್ಲದಂತಾಗಿದೆ. ಸರ್ಕಾರ ಕ್ರಮವಹಿಸಬೇಕೆಂದು ಎಚ್ಚರಿಕೆ ನೀಡಿದರು. ಇಲ್ಲದಿದ್ದರೆ ರೈತರೆಲ್ಲರೂ ಹೋರಾಟಕ್ಕೆ ಸಿದ್ದರಿದ್ದಾರೆ ಅವರ ಜೊತೆಗೆ ನಾವಿರುತ್ತೇವೆಂದರು.

ನಿಚ್ಚಣಕಿ ಮಡಿವಾಳೇಶ್ವರ ಮಠ ಪಂಚಾಕ್ಷರಿ ಸ್ವಾಮಿಜೀ ಸಾನಿಧ್ಯ ವಹಿಸಿ ಮಾತನಾಡಿದರು. ಕಬ್ಬಿಗೆ ಬೆಲೆ ನಿಗದಿಯಾಗಿದೆ ಎಂದು ರೈತರು ಮನೆಯಲ್ಲಿ ಕುಳಿತಿಲ್ಲ. ಹೋರಾಟ ಮುಂದುವರೆಸಿದ್ದಾರೆ. ಇದು ಸರ್ಕಾರಕ್ಕೆ ಎಚ್ಚರವಿರಲಿ ಮತ್ತು ಅದರೊಂದಿಗೆ ಇನ್ನೂಳಿದ ಬೆಳೆಗಳನ್ನು ಬೆಳೆದು ಮಾರುಕಟ್ಟೆಗೆ ತಂದರೆ ಬೆಲೆ ಇಲ್ಲದಂತಾಗಿದ್ದು ಅದಕ್ಕೆ ಯೋಗ್ಯ ಬೆಲೆ ನಿಗದಿಮಾಡಬೇಕು. ತಾಲೂಕಿನ ಕುಲವಳ್ಳಿ ಗ್ರಾಪಂ ವ್ಯಾಪ್ತಿಯ 9 ಹಳ್ಳಿಗಳ ಭೂಮಿ ಹಕ್ಕಿಗಾಗಿ ಹೋರಾಟ ಮಾಡುತ್ತಿರುವ ಈ ಭಾಗದ ರೈತರಿಗೆ ನಾವೆಲ್ಲರೂ ಜೊತೆಗಿರೋಣ ವೆಂದರು. ರೈತ ಮುಖಂಡ ಇಂಗಳಗುಪ್ಪೆ ಕೃಷ್ಣೇಗೌಡ ಮಾತನಾಡಿದರು.ಮುಖಂಡರಾದ ಮೆಹಬೂಬ ನವಲಗುಂದ, ಬಸವರಾಜ ಮೊಕಾಶಿ, ಶಿವಸಿಂಗ ಮೊಕಾಶಿ, ನಿಂಗಪ್ಪ ತಡಕೋಡ, ಮಲ್ಲಿಕಾರ್ಜುನ ಕೊಡಳ್ಳಿ, ಎಂ.ಎಫ್ ಜಕಾತಿ, ಅಪ್ಪೇಶ ದಳವಾಯಿ, ಬೀರಪ್ಪ ದೇಶನೂರ, ಸಿದ್ದಲಿಂಗಯ್ಯಾ ವಕ್ಕುಂದಮಠ, ಇನ್ನೂ ಹಲವರು ಮಾತನಾಡಿದರು.

ಸಭೆಯಲ್ಲಿ ನಾಗರತ್ನಾ ಪಾಟೀಲ, ರಘುನಾಥ ನಡುವಿನಮನಿ, ವಿಜಯಕುಮಾರ ಶಿಂದೆ, ಮಡಿವಾಳಪ್ಪ ದೇವರಮನಿ, ಮಹಾದೇವಿ, ಹುಯಿಲಗೋಳ, ಫಕ್ಕೀರಪ್ಪ ಜಾಗಂಟಿ, ಈರಣ್ಣಾ ಅಂಗಡಿ, ಕಮ್ಮಾರ ಸೇರಿದಂತೆ ವಿವಿಧ ಜಿಲ್ಲೆ-ತಾಲೂಕ-ಹಳ್ಳಿಗಳಿಂದ ರೈತರು ಪಾಲ್ಗೊಂಡಿದ್ದರು. ಇದೇ ವೇಳೆ ಕಾರ್ಖಾನೆಯಲ್ಲಿ ಕಬ್ಬಿನ ತೂಕದಲ್ಲಾಗುವ ಮೋಸ ಹಾಗೂ ಡಿ. 23ರಂದು ರೈತರ ದಿನಾಚರಣೆ ಆಚರಿಸುವ ಕುರಿತು ಚರ್ಚಿಸಲಾಯಿತು.



# ಮೊಬೈಲ್ ಬಳಕೆ ಕಡಿಮೆ ಮಾಡಿ ಪುಸ್ತಕಗಳನ್ನ ಓದಲುಕರೆ



ರಬಕವಿ-ಬನಹಟ್ಟಿ,ನ.17:ಪುಸ್ತಕಗಳನ್ನು ಓದುವುದರಿಂದ ನಮ್ಮ ಜ್ಞಾನ ಹೆಚ್ಚುತ್ತದೆ. ಮೊಬೈಲ್ ಬಳಕೆ ಕಡಿಮೆ ಮಾಡಿ ಪುಸ್ತಕಗಳನ್ನು ಓದಬೇಕು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಶಾಖಾ ಗ್ರಂಥಾಲಯದಲ್ಲಿರುವ ಪತ್ರಿಕೆಗಳು, ಪುಸ್ತಕಗಳು ಪ್ರಯೋಜನಕಾರಿಯಾಗಿವೆ. ಶಿಕ್ಷಣ ಇಲಾಖೆ, ಸಾಹಿತ್ಯ ಪರಿ?ತ್ತು, ಗ್ರಂಥಾಲಯ ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅವು ಒಂದಕ್ಕೊಂದು ಪೂರಕವಾಗಿವೆ ಎಂದು ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿ?ತ್ತಿನ ಅಧ್ಯಕ್ಷರಾದ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ, ಜಿಲ್ಲಾ ಕೇಂದ್ರ ಗ್ರಂಥಾಲಯ ಬಾಗಲಕೋಟೆ, ರಬಕವಿ ಶಾಖಾ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ಸಾಹಿತ್ಯ ಪರಿ?ತ್ತು ಪ್ರಕಟಿಸಿರುವ ಪುಸ್ತಕಗಳನ್ನು ಸ್ಥಳೀಯ ಅನುದಾನದಲ್ಲಿ ಗ್ರಂಥಾಲಯ ಇಲಾಖೆಯವರು ಖರೀದಿಸಬೇಕೆಂದು ಮನವಿ ಮಾಡಿದರು. ರಬಕವಿ-ಬನಹಟ್ಟಿ ತಾಲೂಕಾ ಕನ್ನಡ ಸಾಹಿತ್ಯ ಪರಿ?ತ್ತಿನ ಅಧ್ಯಕ್ಷರಾದ ಮ.ಕೃ. ಮೇಗಾಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ರಬಕವಿ ಶಾಖಾ ಗ್ರಂಥಾಲಯದಲ್ಲಿ ಉಪಯುಕ್ತವಾದ ಸಾವಿರಾರು ಪುಸ್ತಕಗಳು ಓದುಗರ ಜ್ಞಾನದ ಹಸಿವು ಹಿಂಗಿಸುತ್ತಿವೆ. ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯಲು, ಜೀವನದ ಯಶಸ್ವಿಗೆ ಬೇಕಾದ ಮಾರ್ಗದರ್ಶನ ನೀಡುವ ಹಲವಾರು ಪುಸ್ತಕಗಳನ್ನು ಓದಲು ಸ್ಥಳೀಯ ಪುಸ್ತಕ ಪ್ರೇಮಿಗಳು, ಓದುಗರು, ಶಾಲಾ-ಕಾಲೇಜಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಶಾಖಾ ಗ್ರಂಥಾಲಯುಕ್ಕೆ ಸದಸ್ಯತ್ವ ಪಡೆದುಕೊಳ್ಳಬೇಕು ಎಂದರು.

ನಗರಸಭಾ ಸದಸ್ಯೆಗೌರಿ ಮಿಳ್ಳಿ,, ತಾಲೂಕಾ ಕಸಾಪ ಕೋಶಾಧ್ಯಕ್ಷ ಡಿ.ಬಿ. ಜಾಯಗೊಂಡ, ಸಂ. ಕಾರ್ಯದರ್ಶಿ ಈರ ಣ್ಣಗ ಣವ ುಖಿ ಅತಿಥಿಗಳಾಗಿ ಆಗಮಿಸಿದ್ದರು.

ರಬಕವಿ ಗ್ರಂಥಾಲಯ ಸಹವರ್ತಿ ಶಿವಾನಂದ ಮಣಗುತ್ತಿ ಸ್ವಾಗತಿಸಿದರು. ಕಸಾಪ ತಾಲೂಕಾ ಕಾರ್ಯದರ್ಶಿ ಶ್ರೀಶೈಲ ಬುರ್ಲಿ ನಿರೂಪಿಸಿದರು. ಗಿರೀಶ ತೇಲಿ ವಂದಿಸಿದರು.ಸಚೀನ ಜಗದಾಳ, ಗಂಗಪ್ಪ ಬೀಳಗಿ, ಸೂರ್ಯ ಕಾಂತ ಖವಾಸಿ, ಚಿದಾನಂದಕಟಗಿ, ಪ್ರಕಾಶ ಶಿಂಪಿ ಪಾಲ್ಗೊಂಡಿದ್ದರು.

# ಐದನಿ ಚಿನ್ನದ ಪದಕ ಪ್ರಶಸ್ತಿ ಪ್ರದಾನ ಸಮಾರಂಭ

ಬಳ್ಳಾರಿ,ನ.17:ಐದು ದಶಕಗಳ ಕಾಲ ಪ್ರಾಗೈತಿಹಾಸಿಕ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ ಸಂಶೋಧಕ ಜಂಗಮ ಡಾ. ರವಿ ಕೋರಿಶೆಟ್ಟರ್ ಎಂದು ಖ್ಯಾತ ಸಾಹಿತಿ ಕುಂ.ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಬಳ್ಳಾರಿ ನಗರದ ಡಾ. ರಾಜಕುಮಾರ್ ರಸ್ತೆಯಲ್ಲಿರುವ ಡಾ. ಸುಭದ್ರಮ್ಮ ಮನ್ಸೂರು ಬಯಲು ರಂಗ ಮಂದಿರದಲ್ಲಿ ಬೆಂಗಳೂರಿನ ಐದನಿ ಎಂಟರ್‌ಟೈನ್‌ಮೆಂಟ್ ಸಂಸ್ಥೆ ಶುಕ್ರವಾರ ಆಯೋಜಿಸಿದ್ದ 2025ನೇ ಸಾಲಿನ ಪ್ರತಿಷ್ಠಿತ 'ಐದನಿ ಚಿನ್ನದ ಪದಕ' ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪ್ರೊ. ರವಿ ಕೋರಿಶೆಟ್ಟರ್ ಅವರು ಬಳ್ಳಾರಿ ಜಿಲ್ಲೆಯಲ್ಲಿ ಜನಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಮಹಾನ್ ಸಂಶೋಧಕರು. ಅಂತಹ ಸಂಶೋಧಕರು ಅಂತಾರಾಷ್ಟ್ರೀಯ ಮಟ್ಟದ ಟೋನಿ ಜೋಸೆಫ್ ಅವರ ಅರ್ಲಿ ಹ್ಯುಮನ್ಸ್ ಸಂಶೋಧನಾ ಕೃತಿಯಲ್ಲಿ ಸ್ಥಾನ ಪಡೆದಿದ್ದಾರೆ. ಪ್ರಾಗೈತಿಹಾಸಿಕ ಸಂಶೋಧನೆಯ ಮೂಲಕ ನಮ್ಮ ಮುಂದೆ ಹೊಸ ಪ್ರಪಂಚವನ್ನು ಸೃಷ್ಟಿಸುತ್ತಾರೆ.

ಇದು ಅಪಾಯಕಾರಿ ಸಂದರ್ಭ. ಗಾಂಧೀಜಿ ನೆಹ್ರು ಅಂಥವರನ್ನು ನೇಪಥ್ಯಕ್ಕೆ ಸರಿಸುವ ಹುನ್ನಾರವಾಗುತ್ತಿದೆ.

ಇತಿಹಾಸ ಮರೆತರೆ ವರ್ತಮಾನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಕಲ್ಲಿನ ರಥ ಮಾತ್ರ ಮುಖ್ಯವಲ್ಲ. ಬಳ್ಳಾರಿ ಜಿಲ್ಲೆಯ ಕಲ್ಲು ಕಲ್ಲು ಕೂಡ ಮುಖ್ಯ.

ರವಿ ಕೋರಿಶೆಟ್ಟರ್ ಅವರ ಆಂಗ್ಲ ಕೃತಿಗಳು ಕನ್ನಡ ಭಾಷೆಗೆ ಭಾಷಾಂತರವಾಗಬೇಕು. ಆ ಮೂಲಕ ಸಮಸ್ತ ಕನ್ನಡಿಗರಿಗೆ ಅವರ ಸಂಶೋಧನಾ ಸಾಹಿತ್ಯ ತಲುಪಬೇಕಿದೆ, ಅವರ ಸಂಶೋಧನೆಗಳು ಶಾಶ್ವತವಾಗಿ ಉಳಿಯಬೇಕು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು,ಖ್ಯಾತ ಪ್ರಾಗೈತಿಹಾಸಿಕ ತಜ್ಞ ಪ್ರೊ. ರವೀಂದ್ರ ಕೋರಿಶೆಟ್ಟರ್, ನನಗೆ ದೇವನೂರು ಮಹಾದೇವ ಹಾಗೂ ಹಂಸಲೇಖ ಹಿರಿಯ ಸೋದರರಾಗಿದ್ದಾರೆ.

ಬಾಲ್ಯದಿಂದಲೂ ಸಮಾಜಮುಖಿ ಜೀವನ ನಡೆಸುವ ಉದ್ದೇಶವಿತ್ತು. ಆದರೆ, ನಾನು ಆಯ್ಕೆ ಮಾಡಿಕೊಂಡ ಕ್ಷೇತ್ರ ಸಮಾಜದಿಂದ ದೂರವಿರಿಸಿತು. ಜನಸಾಮಾನ್ಯರಿಗೆ ಹತ್ತಿರವಾಗುವ ತುಡಿತ ಸದಾ ಇತ್ತು. ಕನ್ನಡ ಭಾಷೆಯ ಮೂಲಕ ನನ್ನ ಸಮಾಜಮುಖಿ ಜೀವನ ಈಗ ಸಾಧ್ಯವಾಗುತ್ತಿದೆ.

ನಮ್ಮ ಜೀವಮಾನ ಸೀಮಿತ.ನಮ್ಮ ಪೂರ್ವೇತಿಹಾಸ ಲಕ್ಷಾಂತರ ವರ್ಷದ್ದು. ಮನುಷ್ಯನಿಗೆ ಸವಾಲುಗಳು ಎದುರಾದಾಗ ವೈವಿಧ್ಯಮಯ ರೀತಿಗಳಿಂದ ಪರಿಹರಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ.

ಭವಿಷ್ಯದ ಪೀಳಿಗೆಗೆ ನಮ್ಮ ಜ್ಞಾನ ಪರಂಪರೆಯನ್ನು ಸಾಗಿಸಬೇಕು. ವೈಜ್ಞಾನಿಕ ಚೌಕಟ್ಟಿರುವ ಪುರಾತತ್ವ ಶಾಸ್ತ್ರ ಯಾವುದೇ ವೇದ, ಪುರಾಣ ಮತ್ತಿತರ ಕೃತಿಗಳು ಹೇಳಿಕೊಡದ ಪಾಠ ಕಲಿಸುತ್ತವೆ ಎಂದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಇತಿಹಾಸವನ್ನು ಅರ್ಥಮಾಡಿಕೊಂಡರೆ ನಮ್ಮ ನಡುವಿನ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರೆಯುತ್ತದೆ. ಧರ್ಮ, ಸಂಸ್ಕೃತಿ, ಭಾಷೆ ಇತ್ಯಾದಿಗಳು ನಾವು ಕಟ್ಟಿಕೊಂಡದ್ದು. ಆದರೆ, ಮೂಲದಲ್ಲಿ ನಾವೆಲ್ಲರೂ ಒಂದೇ ಅನ್ನೋದನ್ನು ಪ್ರಾಗೈತಿಹಾಸಿಕ ಅಧ್ಯಯನ ತಿಳಿಸಿಕೊಡುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಸಂಗೀತ ನಿರ್ದೇಶಕ ಡಾ. ಹಂಸಲೇಖ, ಶಿಕ್ಷಣಕ್ಕೆ ಮತ್ತು ವಿಜ್ಞಾನಕ್ಕೆ ವೈಚಾರಿಕತೆ ಬೇಕು.





# ಬೆಳೆ ವಿಮೆ, ಹಾನಿ ಪರಿಹಾರಕ್ಕೆ ಆಗ್ರಹ: ಮುಂದುವರಿದ ಧರಣಿ



ಲಕ್ಷ್ಮೇಶ್ವರ,ನ.17 :ಗೋವಿನಜೋಳದ ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭವಾಗಬೇಕು, ರೈತರಿಗೆ ಬೆಳೆವಿಮೆ, ಬೆಳೆಹಾನಿ ಪರಿಹಾರ ಜಮೆ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ ಶನಿವಾರದಿಂದ ಹಲವಾರು ರೈತ ಸಂಘಟನೆಗಳು ಕೈಗೊಂಡ ಅಹೋರಾತ್ರಿ ಧರಣಿ ಸತ್ಯಾಗ್ರಹ ಎರಡನೇ ದಿನಕ್ಕೆ ಕಾಲಿರಿಸಿದ್ದು, ವಿವಿಧ ಪಕ್ಷಗಳ ಮುಖಂಡರು ಬೇಟಿ ನೀಡಿ ಹೋರಾಟಕ್ಕೆ ನೈತಿಕ ಬೆಂಬಲ ಸೂಚಿಸುತ್ತಿದ್ದು, ರೈತರ ಹೋರಾಟಕ್ಕೆ ಮತ್ತಷ್ಟು ಪುಷ್ಟಿ ದೊರಕಿದೆ.

ಹೋರಾಟದ ಎರಡನೇ ದಿನ ಮಾಜಿ ಶಾಸಕ ಜಿ.ಎಸ್.ಗಡ್ಡದೇವರಮಠ ಅವರು ಬೇಟಿ ನೀಡಿ ಹೋರಾಟಗಾರರೊಂದಿಗೆ ಚರ್ಚೆ ನಡೆಸಿದರು. ನಂತರ ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ಇದು ರೈತಪರ ಹೋರಾಟವಾಗಿದ್ದು, ರೈತರ ಬೇಡಿಕೆಗಳು ನ್ಯಾಯಯುತವಾಗಿರುವದರಿಂದ ರೈತರಿಗೆ ನೈತಿಕವಾಗಿ ಬೆಂಬಲ ನೀಡುವದು ನಮ್ಮ ಕರ್ತವ್ಯವಾಗಿದೆ, ಈ ಕುರಿತಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳು ರಾಜ್ಯ ಸರಕಾರಗಳು ರೈತರ ಸಮಸ್ಯೆಗೆ ಕೂಡಲೇ ಸ್ಪಂದಿಸುವದು ಅಗತ್ಯವಾಗಿದೆ. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಸಮಯದಲ್ಲಿ ಸೂಕ್ತ ಬೆಲೆ ದೊರಕಿದರೆ ರೈತರು ನೆಮ್ಮದಿಯಾಗಿರಲು ಸಾಧ್ಯ, ಈ ನಿಟ್ಟಿನಲ್ಲಿ ಸರಕಾರದ ಮಟ್ಟದಲ್ಲಿ ಸಂಬಂಧಿಸಿದ ಕೃಷಿ ಸಚಿವರು, ಉಸ್ತುವಾರಿ ಸಚಿವರು, ಸಿಎಂ., ಡಿಸಿಎಂ., ಅಧಿಕಾರಿಗಳನ್ನ ಬೇಟಿ ಮಾಡಿ ಕೂಡಲೇ ಬೆಂಬಲ ಬೆಲೆ ಖರೀದಿ ಕೇಂದ್ರ ತೆಗೆದು ಅನೂಕೂಲ ಮಾಡಿಕೊಡುವಂತೆ ಒತ್ತಡ ಹೇರುವ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ ಎಂದು ಹೇಳಿದರು.

ಕೆಪಿಸಿಸಿ ಕಾರ್ಯದರ್ಶಿ ಹಿರಿಯ ಮುಖಂಡ ಟಿ. ಈಶ್ವರ ಅವರು ಸಹ ಬೇಟಿ ನೀಡಿ ಬೆಂಬಲ ಘೋಷಿಸಿ ಮಾತನಾಡಿ ರೈತರ ನೋವು ನಮಗೂ ಅರ್ಥವಾಗುತ್ತದೆ, ಹಗಲು ರಾತ್ರಿ, ಮಳೆ, ಬಿಸಿಲು ಎನ್ನದೆ ದೇಶದ ಜನರಿಗೆ ಅನ್ನನೀಡುವ ನಿಟ್ಟನಲ್ಲಿ ಬೆವರು ಹರಿಸಿ ದುಡಿಯುವ ರೈತರಿಗೆ ಬೆಳೆ ಬಂದ ವೇಳೆ'ಯಲ್ಲಿ ಇಂತಹ ಪರಿಸ್ಥಿತಿ ಬರುತ್ತಿರುವದು ನಿಜಕ್ಕೂ ಖೇದಕರ ಸಂಗತಿ, ಈ ಕುರಿತಂತೆ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ಶೀಘ್ರ ಖರೀದಿ ಕೇಂದ್ರ ಪ್ರಾರಂಭಿಸುವಂತೆ ಮನವಿ ಮಾಡುತ್ತೇವೆ. ರೈತರೊಂದಿಗೆ ನಾವಿದ್ದೇವೆ ಇದು ಪಕ್ಷಾತೀತವಾದ ಹೋರಾಟವಾಗಿದ್ದು ನಿಮ್ಮ ಹೋರಾಟದಲ್ಲಿ ನಾವು ಭಾಗಿಯಾಗುತ್ತೇವೆ ಎಂದು ಹೇಳಿದರು.

ಜಿ.ಪಂ.ಮಾಜಿ ಸದಸ್ಯ ಶಿವಪ್ರಕಾಶ ಮಹಾಜನಶೆಟ್ಟರ ಹಾಗೂ ಅಖಿಲ ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದ ತಾಲೂಕ ಅಧ್ಯಕ್ಷ ಟಾಕಪ್ಪ ಸಾತಪೂತೆ ಮಾತನಾಡಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರದ ಗದ್ದುಗೆ ಏರುವ ಸರ್ಕಾರಗಳು ಇದೀಗ ಸಂಕಷ್ಟದಲ್ಲಿರುವ ಗೋವಿನಜೋಳದ ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭಿಸಬೇಕು. ಬೆಳೆವಿಮೆ– ಬೆಳೆಹಾನಿ ಪರಿಹಾರ ಕಲ್ಪಿಸಬೇಕು ಎಂದು ಲಕ್ಷ್ಮೇಶ್ವರದಲ್ಲಿ ಸಮಗ್ರ ರೈತ ಹೋರಾಟ ಸಂಘಟನೆಗಳು ಪಕ್ಷಾತೀತವಾಗಿ ಕಳೆದ 2 ದಿನಗಳಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿಯಲ್ಲಿರುವ ರೈತರ ಕೂಗು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮುಟ್ಟಿಸಬೇಕಿದೆ. ಅದಕ್ಕಾಗಿ ಈ ಹೋರಾಟದ ಸ್ವರೂಪ ಇನ್ನೂ ತೀವ್ರಗೊಳಿಸಬೇಕಾಗಿದ್ದು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂಬುದು ಸಮಗ್ರ ರೈತ ಹೋರಾಟ ಸಂಘಟನೆಗಳ ಒಕ್ಕೊರಲ ಬೇಡಿಕೆಯಾಗಿದೆ ಎಂದರು.

# ಗೋವಿನಜೋಳ ಖರೀದಿ ಪ್ರಾರಂಭಿಸದಿದ್ದರೆ ಹೋರಾಟ

ನವಲಗುಂದ,ಟಿ.17: ನವಲಗುಂದ ವಿಧಾನಸಭಾ ಕ್ಷೇತ್ರವೂ ಸೇರಿದಂತೆ ಜಿಲ್ಲೆಯ ಸಾವಿರಾರೂ ರೈತರು ಗೋವಿನಜೋಳ ಬೆಳೆದು ಸಂಕಷ್ಟದಲ್ಲಿದ್ದರೂ ಖರೀದಿ ಕೇಂದ್ರವನ್ನ ರಾಜ್ಯ ಸರಕಾರ ಆರಂಭಿಸಿಲ್ಲ. ಹೀಗೆ ಮುಂದುವರೆದರೇ ರಸ್ತೆಗಿಳಿದು ಹೋರಾಟ ಮಾಡಲಾಗುವುದೆಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಅವರು ಎಚ್ಚರಿಸಿದರು.

ನವಲಗುಂದ ಪಟ್ಟಣದ ತಹಶೀಲ್ದಾರ ಕಚೇರಿ ಎದುರು ಇಡೀ ದಿನ ಧರಣಿ ನಡೆಸಿದ ಸಮಯದಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಖರೀದಿ ಕೇಂದ್ರ ಆರಂಭಿಸಲು ಆಗದಿದ್ದರೆ ರೈತಕುಲಕ್ಕೆ ಪರಿಹಾರವನ್ನಾದರೂ ಕೊಡಲಿ ಎಂದರು.

ಗೋವಿನಜೋಳ ಬೆಳೆದು ರೈತ ಹೊಲದಲ್ಲಿ ಜೀವನ ಕಳೆಯುವಂತಾಗಿದೆ. ಸರಕಾರಕ್ಕೆ ಇದ್ಯಾವುದು ಕಾಣುತ್ತಿಲ್ಲ. ಕಣ್ಣು, ಕಿವಿ ಸರಕಾರದಲ್ಲಿ ಉಳಿದೇ ಇಲ್ಲ. ಹಾಗಾಗಿಯೇ ಹೋರಾಟ ಅನಿವಾರ್ಯವಾಗಿದೆ ಎಂದರು.

ಮುಂಬರುವ ಹದಿನೈದು ದಿನದಲ್ಲಿ ಖರೀದಿ ಕೇಂದ್ರವನ್ನ ಸರಕಾರ ಆರಂಭಿಸುವ ಮೂಲಕ ರೈತ ಸಂಕುಲಕ್ಕೆ ಅನುಕೂಲ ಮಾಡಬೇಕಿದೆ. ಇಲ್ಲದಿದ್ದರೇ ರಸ್ತೆಗಿಳಿದು ಹೋರಾಟ ಮಾಡಿ, ಹಕ್ಕನ್ನ ಪಡೆಯುತ್ತೇವೆ ಎಂದು ಅವರು ಎಚ್ಚರಿಸಿದರು.

ಸಂಜೆಯವರೆಗೆ ನಡೆದ ಹೋರಾಟದ ಸ್ಥಳಕ್ಕೆ ಆಗಮಿಸಿದ ಎಡಿಸಿ ಸಿ.ಡಿ.ಗೀತಾ ಅವರು ಮನವಿ ಸ್ವೀಕರಿಸಿ, ಶೀಘ್ರ ಖರೀದಿ ಕೇಂದ್ರ ಆರಂಭಿಸುವ ಕುರಿತು ಸರಕಾರದ ಗಮನಕ್ಕೆ ತರುವುದಾಗಿ ಹೇಳಿದರು.

ಪ್ರತಿಭಟನೆಯಲ್ಲಿ ನವಲಗುಂದ ತಾಲೂಕ ಅಧ್ಯಕ್ಷ ಗಂಗಣ್ಣ ಮನಮಿ, ಅಂದಾನಯ್ಯ ಹಿರೇಮಠ, ನಿಂಗಪ್ಪ ಸುತಗಟ್ಟಿ, ಷಣ್ಮುಖ ಗುರಿಕಾರ, ಅಡಿವೆಪ್ಪ ಮನಮಿ, ಸಿದ್ದಣ್ಣ ಕಿಟಗೇರಿ, ಅಣ್ಣಪ್ಪ ಬಾಗಿ, ಫಕ್ಕೀರಪ್ಪ ಜಕ್ಕಪ್ಪನವರ, ಮಂಜು ಅಕ್ಕಿ, ರಾಯನಗೌಡ್ರ ಪಾಟೀಲ, ಎನ್.ಪಿ.ಕುಲಕರ್ಣಿ, ಗುರಪ್ಪ ಅವದಾನಿ, ಮಲ್ಲನಗೌಡ್ರ ರಾಟಿಮನಿ, ಸಿದ್ಧನಗೌಡ ಪಾಟೀಲ, ರಾಜಶೇಖರ ಕಂಪ್ಲಿ, ಬಿ.ಎಸ್. ಪಾಟೀಲ, ಈರಣ್ಣ ಹಸಬಿ, ರೋಹಿತ ಮತ್ತಿಹಳ್ಳಿ, ಸೋಮು ಪಟ್ಟಣಶೆಟ್ಟಿ, ಸಂತೋಷ ಜೀವನಗೌಡ್ರ, ವಜ್ರಗೌಡ್ರ ಪಾಟೀಲ, ಮಂಜುನಾಥ ಗಣಿ, ಮಹಾದೇಗೌಡ್ರ ಬಾಳನಗೌಡ್ರ, ಯಲ್ಲಪ್ಪ ಮಾಡಳ್ಳಿ, ನಾಗಪ್ಪ ಹರ್ತಿ, ರುದ್ರಪ್ಪ ದುಂದೂರ,

ಮಲ್ಲಪ್ಪ ಹಳಕಟ್ಟಿ, ನಿಂಗಯ್ಯ ಬಣದಲೂಮಠ, ಮಹಾಂತೇಶ ಕಲಾಲ, ಐ.ಡಿ.ಪ್ರಭು, ಆನಂದ ಚವಡಿ, ದುಂಡಪ್ಪ ಶೆಟ್ಟರ್, ಮಲ್ಲಿಕಾರ್ಜುನಗೌಡ ಸಂಗನಗೌಡ್ರ, ಅರುಣ ಮೆಣಸಿನಕಾಯಿ, ಶಿವಾನಂದ ಹೊಸಳ್ಳಿ, ಶಿವಕುಮಾರ ಬಳಿಗೇರ, ಮಹಾಬಳೇಶ್ವರ ಅಣ್ಣಿಗೇರಿ, ಗಂಗಣ್ಣ ದುಂದೂರ ಸೇರಿದಂತೆ ನೂರಾರೂ ಕಾರ್ಯಕರ್ತರು ಧರಣಿಯಲ್ಲಿ ಭಾಗವಹಿಸಿದ್ದರು.




# ಬಡವರ ಕಷ್ಟಕ್ಕೆ ಸ್ಪಂದಿಸಿದ ಶಾಸಕರಾದ ಬಿ.ನಾಗೇಂದ್ರ



ಬಳ್ಳಾರಿ,ನ.17:ಇತ್ತೀಚಿಗೆ ಹಾಸನ ತಾಲೂಕಿನ ಮೊಸಳೆ ಹೊಸಳ್ಳಿ ಸರ್ಕಾರಿ ಕಾಲೇಜ್ ವಿದ್ಯಾರ್ಥಿಗಳು ಗಣೇಶ ವಿಸರ್ಜನೆ ನೋಡುವ ಸಂದರ್ಭದಲ್ಲಿ ನಡೆದ ಭೀಕರವಾದ ದುರ್ಘಟನೆಯಲ್ಲಿ ಬಳ್ಳಾರಿಯ ಅಂತಿಮ ವರ್ಷದ ಇಂಜಿನಿಯರಿಂಗ್ ಪದವಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಯಾದ ಕೆ. ಪ್ರವೀಣ್ ಕುಮಾರ್ ಮೃತ ಹೊಂದಿರುವ ವಿಷಯುವನ್ನು ತಿಳಿದು ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ. ನಾಗೇಂದ್ರರವರ ಸೂಚನೆಯ ಮೇರೆಗೆ ಅವರ ಆಪ್ತರು ನೊಂದವರ ಕುಟುಂಬಕ್ಕೆ ತೆರಳಿ ಸಾಂತ್ವಾನವನ್ನು ತಿಳಿಸಿ,ಸರ್ಕಾರವು ಮತ್ತು ಶಾಸಕರು ತಮ್ಮ ಕಷ್ಟಕ್ಕೆ ಇರುವುದಾಗಿ ಧೈರ್ಯವನ್ನು ತುಂಬಿದ್ದರು, ಅದರಂತೆ ಸರ್ಕಾರದಿಂದ ಶಾಸಕರು ತ್ವರಿತವಾಗಿ ಪರಿಹಾರವನ್ನು ಈಗಾಗಲೇ ನೊಂದ ಕುಟುಂಬಕ್ಕೆ ಒದಗಿಸಿ ಕೊಟ್ಟಿದ್ದಾರೆ.

ಇಂದು ಮಾಜಿ ಸಚಿವರಾದ ಹಾಗೂ ಬಳ್ಳಾರಿ ಗ್ರಾಮಾಂತರ ವಿಧಾನಸಭಾ ಶಾಸಕರಾದ ಮಾನ್ಯ ಬಿ. ನಾಗೇಂದ್ರರವರ ಸೂಚನೆಯ ಮೇರೆಗೆ ಮಹಾನಗರ ಪಾಲಿಕೆ ಸದಸ್ಯರು ಮತ್ತು ಕಾಂಗ್ರೆಸ್ ಮುಖಂಡರುಗಳು ನೊಂದ ಬಡ ಕುಟುಂಬದವರ ಮನೆಗೆ ತೆರಳಿ ಕಷ್ಟ ಸುಖಗಳ ವಿಚಾರಿಸಿ ಮೃತಪಟ್ಟ ವಿದ್ಯಾರ್ಥಿಯ ತಾಯಿಯಾದ ಕೆ. ಸುಶೀಲಮ್ಮನವರಿಗೆ ಬಳ್ಳಾರಿ ಗ್ರಾಮಾಂತರ ಶಾಸಕರಾದ ಬಿ. ನಾಗೇಂದ್ರರವರು ನೀಡಿರುವ ಒಂದು ಲಕ್ಷ ರೂಪಾಯಿ ಹಣವನ್ನು ಅವರು ಕುಟುಂಬಕ್ಕೆ ಆರ್ಥಿಕ ಸಹಾಯವನ್ನು ಮಾಡಿದರು.

ಈ ಸಂದರ್ಭದಲ್ಲಿ ಮಹಾ ನಗರ ಪಾಲಿಕೆ ಸದಸ್ಯರುಗಳಾದ ನಾಗಲಕರೆ ಗೋವಿಂದು, ಪಿ.ಜಗನ್ನಾಥ್, ಪಾಲಿಕೆ ಸದಸ್ಯರಾದ ರೇಡಿಯೋ ಪಾರ್ಕ್ ಬಿ.ಸೋಮು ಮಾಜಿ ಉಪ ಮಹಾಪೌರರಾದ ಬೆಣಕಲ್ ಬಸವರಾಜಗೌಡ, ಮಾಜಿ ಮಹಾ ನಗರ ಪಾಲಿಕೆ ಸದಸ್ಯರ ಅಕ್ಬರ್, ಜಿಲ್ಲಾ ಕುರುಬ ಸಂಘದ ಪ್ರಧಾನ ಕಾರ್ಯದರ್ಶಿಯಾದ ಕೆ. ಮೋಹನ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಸಂಗನಕಲ್ ವಿಜಯ ಕುಮಾರ್,

ಗ್ರಾಮ ಪಂಚಾಯತಿ ಸದಸ್ಯರಾದ ಜೋಗಿನ ವಿಜಯಕುಮಾರ್ ಕಾಂಗ್ರೆಸ್ ಮುಖಂಡರಾದ ಎ.ಕೆ. ಗಂಗಾಧರ ಜೋಗಿನ ಚಂದ್ರಪ್ಪ ಸಾಮಾಜಿಕ ಜಾಲತಾಣದ ಕನಕ ಪ್ರಕಾಶ್, ಹಾಗೂ ನೊಂದ ಕುಟುಂಬದ ಸಂಬಂಧಿಕರು ಉಪಸ್ಥಿತರಿದ್ದರು.

# ಚುಟುಕು ಸಾಹಿತ್ಯ ಸಮ್ಮೇಳನ

ಕುಂದಗೋಳ,ನ.17: ದುಂದುವೆಚ್ಚದ ಡಿಜೆ ದುಃಸಂಸ್ಕೃತಿ ದೂರಗೊಳಿಸಿ, ಉತ್ತಮವಾದ ಭಕ್ತಿ ಭಜನೆ, ಡೊಳ್ಳು, ಕರಡಿ ಮಜಲು, ಬ್ಯಾಂಡ್ ಸೇರಿದಂತೆ ಸುಸಂಸ್ಕೃತಿಯತ್ತ ಸಾಗಿದಲ್ಲಿ ದಂದುವೆಚ್ಚಕ್ಕೆ ಕಡಿವಾಣ ಬೀಳುವ ಜತೆಗೆ ಮಜಲುಗಾರರ ಹೊಟ್ಟೆ ತುಂಬುತ್ತದೆ ಎಂದು ಕಚುಸಾಪ ಸಮ್ಮೇಳನ ಸರ್ವಾಧ್ಯಕ್ಷ ಎಫ್ ಕೆ ಬಾಳಿಹಳ್ಳಿಮಠ ಹೇಳಿದರು.

ಅವರು ಪಟ್ಟಣದ ಕಲ್ಯಾಣಪೂರ ಬಸವಣ್ಣಜ್ಜನವರ ಸಭಾಭವನದಲ್ಲಿ ತಾಲೂಕ ಚುಟುಕು ಸಾಹಿತ್ಯ ಪರಿಷತ್ ಹಮ್ಮಿಕೊಂಡ 6 ನೇ ಚುಟುಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಮಾತನಾಡಿ ಸರ್ಕಾರಿ ಉದ್ಯೋಗ ಇರದ ಯುವಕರಿಗೆ ವಧು ಅನ್ವೇಷಣೆ ತುಂಬಾ ಕಷ್ಟಕರವಾಗಿದ್ದು, ಹಿರಿಯರು, ವಾಗ್ಮಿಗಳು, ಆಯಾ ಧರ್ಮ–ಜಾತಿ ಗುರುಗಳು, ವಿಚಾರವಂತರ ಒಂದು ನಿರ್ಧಾರದಿಂದ ಉತ್ತಮ ಬೆಳವಣಿಗೆ ಕಾಣಬೇಕಿದೆ ಎಂದು ಕಿವಿಮಾತು ಹೇಳಿದರಲ್ಲದೆ, ಮೂರ್ನಾಲ್ಕು ಸಾಲುಗಳ ಚುಟುಕುಗಳಲ್ಲಿ ಮಾರ್ಮಿಕವಾದ ಅರ್ಥಗಳು ಅಡಗಿದ್ದು, ಇಂದಿನ ಯುವಕರು ಓದುವ ಹವ್ಯಾಸ ರೂಢಿಸಿಕೊಂಡಾಗ ಯಾವುದೇ ಸಾಹಿತ್ಯ ಬರೆಯಲು ಮತ್ತು ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಮೆರವಣಿಗೆ ಚಾಲನೆ ನೀಡಿದ ಮಾಜಿ ಶಾಸಕ, ರಾಜ್ಯ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂಎಸ್ ಅಕ್ಕಿ ಮಾತನಾಡಿ ಚುಟುಕು ಸಾಹಿತ್ಯಕ್ಕೆ ಶ್ರೀ ಮಠಗಳು ಆಶ್ರಯ ನೀಡುತ್ತಾ ಬಂದಿದ್ದು, ಮೂರ್ನಾಲ್ಕು ಸಾಲುಗಳಲ್ಲಿ ಸಾಹಿತ್ಯದ ಅರ್ಥಗರ್ಭಿತವಾದ ಸಮಾಜಕ್ಕೆ ಸಂದೇಶ ನೀಡುತ್ತಾ ಬಂದಿದ್ದು, ಇಂದಿನ ಯುವಕರಲ್ಲಿ ಓದುವ ಹವ್ಯಾಸ ಮತ್ತು ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕೆಂದು ಹೇಳಿದರು. ಜಿಲ್ಲಾ ಕಾ,ನಿ,ಪ ಸಂಘದ ಅಧ್ಯಕ್ಷ ಬಂಡು ಕುಲಕರ್ಣಿ ಮಾತನಾಡಿ ಶತಮಾನಗಳಿಂದ ಚುಟುಕು ಸಾಹಿತ್ಯಕ್ಕೆ ಪತ್ರಿಕೆಗಳ ಕೊಡುಗೆ ಅಪಾರವಾಗಿದ್ದು, ಚುಟುಕು ಸಾಹಿತ್ಯಕ್ಕೆ ಹಿರಿಯ ಸಾಹಿತಿಗಳ ಕೊಡುಗೆ ಸಾಕಷ್ಟಿದೆ.ಯುವ ಸಾಹಿತಿಗಳಿಗಳು ಹಿರಿಯರ ಮಾರ್ಗದರ್ಶನದಲ್ಲಿ ಸಾಗಬೇಕೆಂದರು.

ಧ್ವಜಾರೋಹಣ ನೆರವೇರಿಸಿದ ಕಚುಸಾ ಕೇಂದ್ರ ಸಮಿತಿ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ಮಾತನಾಡಿ ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಸ್ಕೂಲ್ ತೆರೆಯುವ ಮೂಲಕ 7,000 ಕನ್ನಡ ಶಾಲೆಗಳಿಗೆ ಬೀಗ ಬೀಳುತ್ತಿದ್ದು ಸರ್ಕಾರ ಈ ನಿರ್ಧಾರ ಕೈ ಬಿಡಬೇಕೆಂದು ಹೇಳಿದರಲ್ಲದೆ, ಸರ್ಕಾರದ ನೆರವಿಲ್ಲದೆ ರಾಜ್ಯದ 26 ಜಿಲ್ಲೆಗಳಲ್ಲಿ ಶ್ರೀ ಮಠಗಳು, ದಾನಿಗಳ ಮೂಲಕ ಚುಟುಕು ಸಾಹಿತ್ಯ ಕಾರ್ಯಕ್ರಮಗಳು ನಡಿತಾ ಬಂದಿದ್ದು, ನಮ್ಮ ಸಂಘಟನೆಯಿಂದ ಒಂದು ಲಕ್ಷಕ್ಕೂ ಹೆಚ್ಚು ಇದುವರೆಗೂ ಪುಸ್ತಕಗಳನ್ನು ದಾನದ ರೂಪದಲ್ಲಿ ನೀಡುವ ಮೂಲಕ ಓದುವ ಅಭಿರುಚಿ ಮೂಡಿಸಲಾಗಿದೆ, ಸರ್ಕಾರ ಚುಟುಕು ಸಾಹಿತ್ಯಕ್ಕೆ ಆರ್ಥಿಕ ನೆರವು ನೀಡಬೇಕೆಂದು ಹೇಳಿದರು. ಮಾಜಿ ಶಾಸಕ ಎಸ್ ಐ ಚಿಕ್ಕನಗೌಡ್ರ 'ಸಂಕೀರ್ಣ' ಚುಟುಕು ಸಂಕಲನ ಬಿಡುಗಡೆಗೊಳಿಸಿದರು. ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಪಟ್ಟಣದ ಕಲ್ಯಾಣಪುರ ಅಬಿನವ ಬಸವಣ್ಣನವರು. ಶಿವಾನಂದ ಮಠದ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು











# ಹಣಪಡೆದ ಟ್ರಾಮಕೇರ್ ನ ಮೂವರ ಅಮಾನತು



ಬಳ್ಳಾರಿ,ನ.17:ನಗರದ ಸೂಪರ್ ಸ್ಪೇಷಾಲಿಟಿ ಅಸ್ಪತ್ರೆಯ ಟ್ರಾಮಾಕೇರ್ ಸೆಂಟರ್ ನಲ್ಲಿ ರೋಗಿಗಳಿಂದ ಹಣ ಪಡೆಯುತ್ತಿದ್ದ ಮೂವರನ್ನು ಅಮಾನತು ಮಾಡಲಾಗಿದೆ.

ರೋಗಿಗಳು ಮತ್ತು ಅವರ ಸಹಾಯಕರಿಂದ ಹಣ ಪಡೆಯುವ ವೀಡಿಯೋ ವೈರಲ್ ಆಗಿತ್ತು.

ಆಸ್ಪತ್ರೆಯಲ್ಲಿ ಯಾವ ಹಂತ ದಲ್ಲಿ ಯಾವ ಸಿಬ್ಬಂದಿಗೆ ಎಷ್ಟು ಹಣ ನೀಡಬೇಕು. ಎನ್ನುವ ಸಂಪೂರ್ಣ ವಿವರ ವಿಡಿಯೋ ಮಾಡಲಾಗಿದೆ.

ಸೂಪರ್ ಸ್ಪೇಷಾಲಿಟಿ ಟ್ರಾಮಕೇರ್ ಸುಸಜ್ಜಿತ ಆಸ್ಪತ್ರೆ.. ಉತ್ತಮ ವೈದ್ಯರು ಎಲ್ಲಾ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಅದ್ರೇ ಇಲ್ಲಿಯ ಸಿಬ್ಬಂದಿ ಹಣದ ಹಾಪಿಹಾಪಿ ಮಾತ್ರ ರೋಗಿಗಳಿಗೆ ನಿಜಕ್ಕೂ ನರಕವನ್ನು ತೋರಿಸುತ್ತಿದೆ. ಆ್ಯಂಬುಲೈನ್ಸ್ ಸಿಬ್ಬಂದಿಗೆ 200, ಆಡ್ಮಿಟ್ ಮಾಡಲು 100, ಎಕ್ಸರೇ ಗೂ ಮುನ್ನ 100, ಆಪರೇಷನ್ ಗೆ ಕರೆದು ಕೊಂಡು ಹೋಗುವಾಗ 500 ಹೀಗೆ ಪ್ರತಿಯೊಂದು ಹಂತದಲ್ಲಿ ಹಣ ತೆಗೆದುಕೊಳ್ಳುತ್ತಾರೆಂದು ಹೇಳಲಾಗಿದೆ.ಸರ್ಕಾರದ ನಿಗದಿತ ಶುಲ್ಕ ಅಲ್ಲದೇ ಆಸ್ಪತ್ರೆ ಹೋಗಿ ಬರೋದ್ರೊಳಗೆ ಕಡಿಮೆ ಕಡಿಮೆಯಂದ್ರು ಒಬ್ಬ ರೋಗಿ 1500 ಹೆಚ್ಚುವರಿ ಯಾಗಿ ಸಿಬ್ಬಂದಿಗೆ ಕೊಡಬೇಕು..

ನಿತ್ಯ ನೂರರಿಂದ ನೂರೈವತ್ತು ರೋಗಿಗಳ ಬರುವ ಆಸ್ಪತ್ರೆಯಲ್ಲಿರೋ ಇಲ್ಲಿಯ ಸಿಬ್ಬಂದಿ ಸಂಬಳ ಅಲ್ಲದೇ ತಿಂಗಳಿಗೆ 60 ಸಾವಿರ ಹೆಚ್ಚುವರಿಯಾಗಿ ಗಳಿಸುತ್ತಾರೆ..

ಸರ್ಕಾರಿ ಅಸ್ಪತ್ರೆಯ ಒದ್ರೇ ಶ್ರೀಮಂತರು ಬರುತ್ತಾರೆಯೇ , ಕಷ್ಟದಲ್ಲಿ ಬರುವವರ ರಕ್ತ ಹೀರುವ ಸಿಬ್ಬಂದಿ ವಿರುದ್ಧ ಜನಾಕ್ರೋಶ ವ್ಯಕ್ತವಾಗಿತ್ತು.

ವಿಡಿಯೋ ವೈರಲ್ ಅಗ್ತಿದ್ದಂತೆಯೇ ಎಚ್ಚತ್ತುಕೊಂಡ ಸೂಪರ್ ಸ್ಪೇಷಲ್ ಆಸ್ಪತ್ರೆ ಅಧೀಕ್ಷಕರು..

ವಿಡಿಯೋದಲ್ಲಿ ಹಣ ಕೇಳ್ತಿರೋ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡ್ತಿದ್ದ ಶಾನಾಜ್ ಬೇಗಂ, ದುರ್ಗಮ್ಮ ಮತ್ತು ಶಿವಕುಮಾರ್ ಅವರನ್ನು ಅಮಾನತ್ತು ಮಾಡಿ ಉಳಿದ ಸಿಬ್ಬಂದಿಗೆ ಎಚ್ಚರಿಕೆ ನೀಡಲಾಗಿದೆ.

# ಕನಕದಾಸರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಕರೆ


ಬಳ್ಳಾರಿ:ನ,.17:ತಾಲೂಕಿನ ಯಾಳ್ಪಿ ಗ್ರಾಮದಲ್ಲಿ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಧ್ರುವ ಆಸರೆ ಫೌಂಡೇಶನ್ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಎಂ.ಜಿ ಕನಕ ಅವರು ಭಾಗವಹಿಸಿ, ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಭಕ್ತಿ ನಮನ ಸಲ್ಲಿಸಿದರು.

ನಂತರ ಮಾತನಾಡಿದ ಎಂ.ಜಿ ಕನಕ ಅವರು ಸಮಾಜದ ಒಳಿತಿಗಾಗಿ ಸಾಮಾಜಿಕ ಕ್ರಾಂತಿಯನ್ನು ಮಾಡಿದ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ಇಂದು ರಾಜ್ಯದೆಲ್ಲೆಡೆ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಜಾತಿ, ಮತ ಮತ್ತು ಸಮಾಜದ ಪಿಡುಗುಗಳ ಬಗ್ಗೆ ಜನ ಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಹೇಳುತ್ತ, ಸಮಾಜ ಹಾಗೂ ದಾಸಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿದವರು ಕನಕದಾಸರು.

ಕನಕದಾಸರು ತಮ್ಮ ಶ್ರೇಷ್ಠ ಭಕ್ತಿ ಹಾಗೂ ಶ್ರದ್ಧೆಯಿಂದ ಶ್ರೀಕೃಷ್ಣ ಭಗವಂತನನ್ನು ತಮ್ಮ ಕಡೆಗೆ ತಿರುಗುವಂತೆ ಮಾಡಿದರು. “ದಾಸ ಶ್ರೇಷ್ಠ ಕನಕದಾಸರ ಜಯಂತಿಯನ್ನು ಆಚರಣೆ ಮಾಡಿದರೆ ಸಾಲದು ಕನಕದಾಸರ ಆದರ್ಶಗಳನ್ನು, ಮೌಲ್ಯ ಹಾಗೂ ಗುಣಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮೌಲ್ಯಯುತ ಸಮಾಜ ನಿರ್ಮಾಣ ಮಾಡುವುದು ನಮ್ಮಗಳ ಜವಾಬ್ದಾರಿ ಎಂದು ಎಂ.ಜಿ ಕನಕ ಹೇಳಿದರು.

ಭಾರಿ ಜನಸ್ತೋಮದೊಂದಿಗೆ ನಡೆದ ಕನಕದಾಸರ ಭಾವಚಿತ್ರ ಮೆರವಣಿಗೆಯಲ್ಲಿ ಯುವಕರೊಂದಿಗೆ ಎಂ.ಜಿ ಕನಕ ಅವರು ಡಿಜೆ ಶಬ್ದಕ್ಕೆ ಸಖತ್ ಆಗಿ ಹೆಜ್ಜೆ ಹಾಕಿದರು. ಮೆರವಣಿಗೆಯ ದಾರಿ ಉದ್ದಕ್ಕೂ ಶ್ರೀ ಭಕ್ತ ಕನಕದಾಸರ ಪರ ಜಯ ಘೋಷ ಮೊಳಗಿದವು.

ಈ ಸಂದರ್ಭದಲ್ಲಿ ಯಾಳ್ಪಿ ಗ್ರಾಮದ ಮುಖಂಡರಾದ ಹೆಚ್.ಕೆ.ಸೋಮಶೇಖರ್, ಕೆ.ನಾಗಭೂಷಣ್, ಡಿ.ಕೆ.ಮಲ್ಲಿಕಾರ್ಜುನ, ಕೆ.ನಾಗರಾಜ್ ಅಶ್ವತಪ್ಪ, ತಿಪ್ಪೇಸ್ವಾಮಿ,ಪ್ರೆಸಿಡೆಂಟ್ ನಾಗರಾಜ್, ಓಬಳೇಶ್, ಮನೋಹರ, ಹೆಚ್.ಹೇಮರಾಜ್, ಪ್ರಶಾಂತ್, ಯೋಗೇಶ್, ಜಯಣ್ಣ, ಶಂಕ್ರಿ, ಎರ್ರಿಸ್ವಾಮಿ, ಕೃಷ್ಣ ಸೇರಿದಂತೆ ಹಾಲುಮತ ಸಮಾಜದ ಮುಖಂಡರು ಹಾಗೂ ಯುವಕರು ಉಪಸ್ಥಿತರಿದ್ದರು.



# ಹರಗಿನದೋಣಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ



ಬಳ್ಳಾರಿ,ನ.17:ಸರ್ಕಾರಿ ಹಿರಿಯ ಪ್ರಾಥಮಿಕ ಹರಗಿನ ಡೋಣಿ ಶಾಲೆಯಲ್ಲಿ. ಮಕ್ಕಳ ದಿನಾಚರಣೆಯ ಪ್ರಯುಕ್ತ ಪೋಷಕರ ಮತ್ತು ಶಿಕ್ಷಕರ ಮಹಾಸಭೆ ನಡೆಯಿತು. ಸಭೆಯು ಮಕ್ಕಳಿಂದ ಪ್ರಥಮವಾಗಿ ಪ್ರಾರ್ಥನೆಯೊಂದಿಗೆ ಆರಂಭವಾಯಿತು.

ಸರ್ವರನ್ನು ಸ್ವಾಗತಿಸಲಾಯಿತು. ಗೌರವಯುತವಾಗಿ ಸಂವಿಧಾನದ ಪೀಠಿಕೆಯನ್ನು ಹೇಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೋಳದ ರಾಶಿ ತಿಮ್ಮಪ್ಪ ರಾಜ್ಯದ್ಯಕ್ಷರು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕರ ಒಕ್ಕೂಟ ಇವರು ಮಕ್ಕಳಿಗೆ ಮಕ್ಕಳ ದಿನಾಚರಣೆ ಶುಭಾಶಯಗಳು ತಿಳಿಸುತ್ತಾ ಸಿಹಿ ಹಂಚಿದರು. ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದಂತಹ ವ್ಯಕ್ತಿಗಳಾದ ಅಬ್ದುಲ್ ಕಲಾಂ, ಡಾಕ್ಟರ್ ಅಂಬೇಡ್ಕರ್ , ವಿವರಗಳನ್ನು ನಿದರ್ಶನ ನೀಡುತ್ತಾ, ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಪೋಷಕರಾದ ನಿಮ್ಮ ಪಾತ್ರ ಮಹತ್ತರವಾದದ್ದು. ಇದೇ ಶಾಲೆ ಇದೇ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದಂತಹ, ಅನೇಕ ವ್ಯಕ್ತಿಗಳನ್ನು ಗುರುತಿಸುತ್ತಾ. ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿ ನಿಮ್ಮ ಮಕ್ಕಳು ಶಾಲೆಗೆ, ಊರಿಗೆ , ನಾಡಿಗೆ, ಹೆಸರಾಗುವಂತಹ ಅದ್ಭುತ ವ್ಯಕ್ತಿಗಳಾಗಲಿ, ಇಂತಹ ಮಹತ್ತರವಾದ ಕಾರ್ಯ ನಡೆಯಬೇಕಾದರೆ ಪೋಷಕರ ಪಾತ್ರ ಹತ್ತರವಾಗಿದೆ ಎಂದು ಪೋಷಕರಿಗೆ ಅರ್ಥೈಸಿದರು. ಎಸ್ ಟಿ ಎಂಸಿ ಅಧ್ಯಕ್ಷರಾದಂತಹ ದೊಡ್ಡನಗೌಡರು ಶಾಲಾ ಮಕ್ಕಳಿಗೆ ಶುಭ ಕೋರುತ್ತಾ ಮಕ್ಕಳ ಬಗ್ಗೆ ಬಹಳಷ್ಟು ಕಾಳಜಿ ವಹಿಸಿ, ಮಕ್ಕಳ ಪ್ರಗತಿ ಸಾಧಿಸಬೇಕಾದರೆ ಪ್ರತಿದಿನ ಶಾಲೆಗೆ ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಇಂದು ನೀವೆಲ್ಲ ಸೇರಿರುವುದು ತುಂಬಾ ಸಂತೋಷದ ವಿಷಯವೆಂದು ಪೋಷಕರನ್ನು ಕುರಿತು ಮಾತನಾಡುತ್ತಾ ಕಾರ್ಯಕ್ರಮದ ಯಶಸ್ಸಿಗೆ ನಿದರ್ಶನವಾಗಿದ್ದರು. ಮುಖ್ಯ ಗುರುಗಳಾದ ಜೀವ ಮೇಡಂ , ಪ್ರತಿ ಶಿಕ್ಷಕರಿಗೂ ಇಲಾಖೆ ನೀಡಿದಂತಹ ಕರ್ತವ್ಯಗಳನ್ನು ನಿರ್ವಹಿಸಲು ಮಾರ್ಗದರ್ಶನ ಮಾಡಿ ಪೋಷಕರು ಮಕ್ಕಳು ಶಾಲೆಗೆ ಗೈರು ಆಗದಂತೆ ಪ್ರತಿದಿನ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಹೇಳುತ್ತಾ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಿದ್ದರು ಕಾರ್ಯಕ್ರಮದಲ್ಲಿ ಸಹ ಶಿಕ್ಷಕರಾದ ವನಜಾಕ್ಷಮ್ಮ, ಮಂಜುಳ ರಾಣಿ, ಕ್ಷಮಿಸು, ಗ್ರೇಸಿ, ಮಾಧುರಿ, ಮಲ್ಲಿಕಾರ್ಜುನ್, ಲೋಕೇಶ್, ಅತಿಥಿ ಶಿಕ್ಷಕರಾದ ಅಶೋಕ್, ಆರೋಗ್ಯ ಇಲಾಖೆಯವರು, ಅಂಗನವಾಡಿ ಶಿಕ್ಷಕಿರಾದ ಭಾರತಿ, ಭಾಗ್ಯಮ್ಮ, ಗ್ರಾಮ ಪಂಚಾಯತ್ ಉಪಾಧ್ಯಕ್ಷರಾದ ಚಂದ್ರು, ಶಿಕ್ಷಣ ಪ್ರೇಮಿಗಳು, ಊರಿನ ಹಿರಿಯರು, ಪೋಷಕರು ಭಾಗವಹಿಸಿದ್ದರು. ಇದೇ ಸಂಧರ್ಭದಲ್ಲಿ ಯೋಗಾಸನ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ ನವೀನ ಮತ್ತು ನಂದೀಶ ವಿದ್ಯಾರ್ಥಿಗಳನ್ನು, ಗೌರವಿಸಲಾಯಿತು.

# ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಧರಣಿ

ಲಕ್ಷ್ಮೇಶ್ವರ,ನ.17: ಗೋವಿನಜೋಳದ ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭವಾಗಬೇಕು, ರೈತರಿಗೆ ಬೆಳೆ ವಿಮೆ, ಬೆಳೆಹಾನಿ ಪರಿಹಾರ ಜಮೆ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ ಶನಿವಾರ ಹಲವಾರು ರೈತ ಸಂಘಟನೆಗಳು ಕೈಗೊಂಡ ಪ್ರತಿಭಟನಾ ಮೆರವಣಿಗೆ ಮತ್ತು ಅಹೋರಾತ್ರಿ ಧರಣಿ ಸತ್ಯಾಗ್ರಹಬಾರಿ ಬೆಂಬಲ ವ್ಯಕ್ತವಾಯಿತು.

ರೈತರು, ರೈತ ಮುಖಂಡರು, ವಿವಿಧ ಕನ್ನಡಪರ ಸಂಘಟನೆಗಳು, ಕೃಷಿಪರಿಕರ ಮಾರಾಟಗಾರ ಸಂಘದವರು ಸೇರಿ ಎತ್ತು ಚಕ್ಕಡಿಗಳನ್ನೊಳಗೊಂಡ ಪ್ರತಿಭಟನಾ ಮೆರವಣಿಗೆ ಪಟ್ಟಣದ ಸೋಮೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡು ಮುಖ್ಯ ಬಜಾರ್ ರಸ್ತೆಯ ಮೂಲಕ ಸಾಗಿ ಕೆಲ ಹೊತ್ತು ಪಾಳಾ–ಬಾದಾಮಿ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ಬಳಿಕ ಶಿಗ್ಲಿ ನಾಕಾದ ಹತ್ತಿರ ನಿಗದಿಪಡಿಸಿದ ಧರಣಿ ಸತ್ಯಾಗ್ರಹದ ಸ್ಥಳದಲ್ಲಿ ಬೇಡಿಕೆಗಳಿಗೆ ಆಗ್ರಹಿಸಿ ಮತ್ತು ಸರ್ಕಾರದ ಧೋರಣೆಗಳ ವಿರುದ್ಧ ಘೋಷಣೆ ಕೂಗಿದರು.ಈ ವೇಳೆ ಮಾತನಾಡಿದ ಉತ್ತರ ಕರ್ನಾಟಕ ಮಹಾಸಭಾ ರಾಜ್ಯಧ್ಯಕ್ಷ ,ವಕೀಲ ರವಿಕಾಂತ ಅಂಗಡಿ ಉತ್ತರ ಕರ್ನಾಟಕ ಭಾಗದ ರೈತರು ಮಳೆಯನ್ನೇ ಆಧರಿಸಿ ಕೃಷಿಯನ್ನೇ ನಂಬಿ ಬದುಕುತ್ತಾರೆ. ಈ ವರ್ಷ ಅತಿವೃಷ್ಟಿಯಿಂದ ಮುಂಗಾರಿನ ಬೆಳೆಗಳೆಲ್ಲ ಹಾಳಾಗಿದೆ. ಇದೀಗ ಮೆಕ್ಕೆಜೋಳದ ಬೆಳೆಯೇ ಬದುಕಿಗೆ ಆಸರೆಯಾಗಿದೆ. ಆದರೆ ಸರ್ಕಾರ ಘೋಷಿಸಿದ 2400 ರೂ ಕನಿಷ್ಠ ಬೆಂಬಲ ಬೆಲೆ ಘೋಷಣೆಗೆ ಸೀಮಿತವಾಗಿದೆ. ಸದ್ಯ ಕ್ವಿಂಟಲ್‌ಗೆ 1700–1800 ರೂಪಾಯಿಗೂ ಸಹ ಗೋವಿನ ಜೋಳದ ಬೆಳೆ ಖರೀದಿಸುವವರಿಲ್ಲದಂತಾಗಿದೆ. ಸಂಕಷ್ಟದಲ್ಲಿರುವ ರೈತರಿಗೆ ಈಗಲಾದರೂ ಈ ಭಾಗದ ಸಂಸದರು, ಸಚಿವರು, ಶಾಸಕರು ರೈತರ ಹೋರಾಟಕ್ಕೆ ಬೆಂಬಲವಾಗಿ ನಿಂತು ಅವರಿಗೆ ನ್ಯಾಯ ಕೊಡಿಸಲು ಮುಂದಾಗಬೇಕು ಎಂದರು.

ಈ ವೇಳೆ ಹೋರಾಟದ ನೇತೃತ್ವವಹಿಸಿರುವ ರೈತ ಮುಖಂಡ ಮಂಜುನಾಥ ಮಾಗಡಿ, ಹೊನ್ನಪ್ಪ ವಡ್ಡರ, ಚಂಬಣ್ಣ ಬಾಳಿಕಾಯಿ ಅವರು ಮಾತನಾಡಿ ಲಕ್ಷ್ಮೇಶ್ವರ ತಾಲೂಕ ವ್ಯಾಪ್ತಿಯಲ್ಲಿ 21 ಸಾವಿರ ಹೆಕ್ಟೇರ್ ಮತ್ತು ಶಿರಹಟ್ಟಿ ತಾಲೂಕಿನಲ್ಲಿ 24 ಸಾವಿರ ಹೇಕ್ಟೆರ್ ಪ್ರದೇಶದಲ್ಲಿ ಗೋವಿನಜೋಳ ಬೆಳೆಯಲಾಗಿದೆ. ಈಗಾಗಲೇ ಒಂದು ತಿಂಗಳಿಂದ ರೈತರು ಗೋವಿನ ಜೋಳ ಒಕ್ಕಲಿ ಮಾಡಿ ಇಟ್ಟುಕೊಂಡಿದ್ದು ಮಾರಾಟ ಮಾಡದಿದ್ದರೆ ಹುಳ ಹಿಡಿಯುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಜವಾಬ್ದಾರಿಯಿಂದ ನುಣುಚಿಕೊಳ್ಳದೇ ಖರೀದಿ ಕೇಂದ್ರ ಸ್ಥಾಪಿಸಬೇಕು. ರೈತರ ತಾಳ್ಮೆ ಪರೀಕ್ಷೆ ಮಾಡಬೇಡಿ.. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳ ಇಚ್ಚಾಸಕ್ತಿ ಕೊರತೆ, ನಿರ್ಲಕ್ಷ ಎದ್ದು ಕಾಣುತ್ತಿದೆ. ಸಂಬಂಧ ಪಟ್ಟವರು ಸ್ಪಂಧಿಸದಿದ್ದರೆ ರೈತರು ಎತ್ತು, ಎಮ್ಮೆ, ಆಕಳು, ಕುರಿಗಳೊಂದಿಗೆ ರಾಜ್ಯ ಹೆದ್ದಾರಿ ಬಂದ್ ಮಾಡಿ ಹೋರಾಟಕ್ಕಿಳಿಯಲಾಗುವುದು. ಮುಂದಾಗುವ ತೊಂದರೆಗೆ ಸರಕಾರ ಮತ್ತು ಅಧಿಕಾರಿಗಳೇ ಹೊಣೆಯಾಗುತ್ತಾರೆ ಎಂದು ಸರಕಾರಕ್ಕೆ ಪರೋಕ್ಷ ಎಚ್ಚರಿಕೆ ನೀಡಿದರು.ಧರಣಿ ನಿರತ ಸಭೆಯಲ್ಲಿ ಮಾತನಾಡಿದ ಕೃಷಿಕ ಸಮಾಜದ ರಾಜ್ಯಾಧ್ಯಕ್ಷರಾದ ಮಾಣಿಕ್ಯ ಚಿಲ್ಲೂರ ಮಾತನಾಡಿ, ಬೆಂಬಲ ಬೆಲೆ ಘೋಷಣೆಗೆ ಸೀಮಿತವಾಗಬಾರದು.ಈ ವಿಷಯದಲ್ಲಿ ರೈತರ ಹೆಸರಿನಲ್ಲಿ ಅಧಿಕಾರ ಹಿಡಿಯುವ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಬೆಂಬಲ ಬೆಲೆ ಖರೀದಿ ಕೇಂದ್ರಗಳು ವರ್ಷದುದ್ದಕ್ಕೂ ಕಾರ್ಯ ನಿರ್ವಹಿಸಬೇಕು ಎಂದರು.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401